

ಪಠಾಣ್‌ಕೋಟ್ ಸೇನಾ ನೆಲೆ ಮೇಲೆ ಉಗ್ರರ ದಾಳಿ ನಿಗ್ರಹಿಸಿದ ಭಾರತೀಯ ಸೈನ್ಯ



ಬೊಳುವಾರು ಮಹಮ್ಮದ್ ಕುಂಞಿ



ಕೆಲವೇ ವಾರಗಳಲ್ಲಿ ಸಾಕ್ಷಿ ಮಲಿಕ್ ಕಾರನ್ನು ವಾಪಸ್ ಮಾಡಿದರು. 'ತ್ರಿಪುರಾದಲ್ಲಿ ರಸ್ತೆ ಸರಿಯಿಲ್ಲ. ಅಲ್ಲಿ ಈ ಕಾರನ್ನು ಓಡಿಸಲು ಸಾಧ್ಯವಿಲ್ಲ' ಎನ್ನುವುದು ದೀಪಾ ನೀಡಿದ ಕಾರಣ! ಹಾಗೆಯೇ ಸಾಕ್ಷಿ ಅವರು 'ನನಗೆ ಈ ಹಿಂದೆ ಅಪ್ಪ ಕಾಣಿಕೆಯಾಗಿ ಕೊಟ್ಟ ಪೋಲೊ ಕಾರು ಸಾಕು. ಈ ಐಶಾರಾಮಿ ಕಾರನ್ನು ಅಪ್ಪನಿಗೇ ಕಾಣಿಕೆಯಾಗಿ ಕೊಡುತ್ತೇನೆ' ಎಂದು ಪ್ರಕಟಿಸಿದರು.

ರಾಜಕೀಯ ಕ್ಷೇತ್ರವನ್ನು ಗಮನಿಸಿದರೆ ವರ್ಷವಿಡೀ 'ಮಾಧ್ಯಮಗಳ ಡಾರ್ಲಿಂಗ್' ಆಗಿ ಮೆರೆದವರು ಪ್ರಧಾನಮಂತ್ರಿ ನರೇಂದ್ರ ಮೋದಿ. ಹಿಂದಿನ ವರ್ಷಗಳಂತೆ ಈ ವರ್ಷವೂ ಅವರು ತಮ್ಮ ವಿದೇಶ ಪ್ರವಾಸಗಳ ಸರಣಿಯನ್ನು ಮುಂದುವರಿಸಿದ್ದಾರೆ. ಜತೆಗೆ ವಿದೇಶಗಳ ಹಲವು ಪ್ರಮುಖರನ್ನು ಭಾರತಕ್ಕೆ ಆಹ್ವಾನಿಸಿ ಗಮನ ಸೆಳೆದಿದ್ದಾರೆ. ಅದರಲ್ಲೂ ಅಕ್ಟೋಬರ್‌ನಲ್ಲಿ ಗೋವಾದಲ್ಲಿ ನಡೆದ 'ಬ್ರಿಕ್ಸ್' ಸಮ್ಮೇಳನ ಮಹತ್ವದ್ದು. ಬ್ರೆಝಿಲ್, ರಶ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ ದೇಶಗಳು ಸೇರಿ ನಡೆಸಿರುವ ಸಮ್ಮೇಳನವಿದು. ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 43ರಷ್ಟು ಪಾಲನ್ನು ಹೊಂದಿರುವ ಈ ಐದು ದೇಶಗಳು, ವಿಶ್ವದ ಒಟ್ಟು ದೇಶೀಯ ಉತ್ಪಾದನೆಯಲ್ಲಿ ಶೇಕಡಾ 30ರಷ್ಟು ಪಾಲನ್ನು ಹೊಂದಿವೆ. ಗೋವಾದಲ್ಲಿ ಜಗತ್ತಿನ ಎರಡು ಪ್ರಬಲ ರಾಷ್ಟ್ರಗಳಾದ ರಶ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಚೀನಾದ ಅಧ್ಯಕ್ಷ ಕ್ಸಿ ಪಿನ್‌ಜಿಂಗ್ ಇಬ್ಬರೂ ಸೇರಿದ್ದು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕೆ ಹೊಸ ಕಿರೀಟ ತೊಡಿಸಿತು.

## ರಾಜ್ಯಗಳಲ್ಲಿ ಏರಿಳಿತ

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅತ್ಯಂತ ಹೆಚ್ಚು ರಾಜಕೀಯ ಸವಾಲುಗಳನ್ನು ಒಡ್ಡಿದವರು ನಿಸ್ಸಂಶಯವಾಗಿ ದೆಹಲಿ ಮುಖ್ಯಮಂತ್ರಿ ಆಮ್ ಆದ್ಮಿ ಪಕ್ಷದ ಅರವಿಂದ ಕೇಜ್ರಿವಾಲ್. ವರ್ಷದ ಕೊನೆಗೆ ನೋಟು ನಿಷೇಧದ ವಿಷಯದಲ್ಲಿ ಬೀದಿಗಿಳಿದು ಹೋರಾಟ ಮಾಡಿದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೂ ಈ ಪಟ್ಟಿಗೆ ಸೇರಿಕೊಂಡರು. ಆದರೆ ವರ್ಷದ ಉದ್ದಕ್ಕೂ ಸುದ್ದಿಯಾದ ಮುಖ್ಯಮಂತ್ರಿಗಳ ಪೈಕಿ ತಮಿಳ್ನಾಡಿನ ಜೆ.ಜಯಲಲಿತಾ ಅಗ್ರಗಣ್ಯರು. ವರ್ಷದ ಮಧ್ಯೆ ನಡೆದ ತಮಿಳ್ನಾಡಿನ ವಿಧಾನಸಭಾ ಚುನಾವಣೆಯಲ್ಲಿ ಅವರು ಬಹುಮತ ಪಡೆದು ಗೆದ್ದು ಐದನೇ ಬಾರಿ ಮುಖ್ಯಮಂತ್ರಿ ಹುದ್ದೆಯನ್ನು ಅಲಂಕರಿಸಿದರು. ಮಾತ್ರವಲ್ಲ ವರ್ಷದ ಕೊನೆಯಲ್ಲಿ ಅನಾರೋಗ್ಯದಿಂದ ಆಸ್ಪತ್ರೆ ಸೇರಿ ಮೃತರಾಗಿ ರಾಜ್ಯದ ಜನರನ್ನು ಕಣ್ಣೀರ ಕಡಲಲ್ಲಿ ಮುಳುಗಿಸಿದರು.

ಗುಜರಾತ್ ಮುಖ್ಯಮಂತ್ರಿ ಆನಂದಿಬೆನ್ ಪಟೇಲ್ ಅವರನ್ನು ಹುದ್ದೆ ತ್ಯಜಿಸುವಂತೆ ಮಾಡಿದ್ದು ಅವರದ್ದೇ ಪಕ್ಷ , ರಾಜ್ಯ ಮಟ್ಟದಲ್ಲಿ ಇನ್ನೊಂದು ಮುಖ್ಯ ಘಟನೆ. ಜಮ್ಮು– ಕಾಶ್ಮೀರ ರಾಜ್ಯದ ಮುಖ್ಯಮಂತ್ರಿಯಾಗಿ ಎರಡು ಬಾರಿ ಅಧಿಕಾರ ನಿರ್ವಹಿಸಿದ ಮುಫ್ತಿ ಮೊಹಮ್ಮದ್ ಸಯೀದ್ ನಿಧನರಾದದ್ದು ಆ ರಾಜ್ಯದ ಮಟ್ಟಿಗೆ ಮಹತ್ವದ ಘಟನೆ. ಉತ್ತರಾಖಂಡ ಮತ್ತು ಅರುಣಾಚಲ ಪ್ರದೇಶಗಳಲ್ಲಿ ಕೇಂದ್ರ ಸರಕಾರ ಸಂವಿಧಾನದ 356ನೇ ವಿಧಿಯನ್ನು ಬಳಸಿ ರಾಷ್ಟ್ರಪತಿಗಳ ಆಳ್ವಿಕೆ ಹೇರಿದ್ದು ಸಾಕಷ್ಟು ಸಾಂವಿಧಾನಿಕ ಚರ್ಚೆಗೆ ಕಾರಣವಾಯಿತು. ಕಾಶ್ಮೀರದಲ್ಲಿ ಉಗ್ರವಾದಿ ಎಂದೇ ಪರಿಗಣಿಸಲ್ಪಟ್ಟ ಬುರ್ಹಾನ್ ವಾನಿಯ ಹತ್ಯೆ ಮತ್ತು ಅದು ಉಂಟುಮಾಡಿದ ಹಿಂಸಾತ್ಮಕ ಪ್ರತಿಕ್ರಿಯೆಗಳು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾದವು. ವರ್ಷದ ಕೊನೆಗೂ ಕಾಶ್ಮೀರದಲ್ಲಿ ಶಾಂತಿ ಮರಳಿಲ್ಲ ಎನ್ನುವುದು ಅಲ್ಲಿನ ವಿಷಾದ ಪರ್ವದ ಮುಂದುವರಿಕೆಯಂತೆ ಕಾಣುತ್ತಿದೆ.

ಸಶಸ್ತ್ರ ಪಡೆಗಳ ಅಧಿಕಾರವನ್ನು ಮೊಟಕುಗೊಳಿಸಬೇಕೆಂದು ಕೋರಿ ಇಂಫಾಲ್‌ನಲ್ಲಿ ಕಳೆದ 16 ವರ್ಷಗಳಿಂದ ಉಪವಾಸ ನಿರಶನ




ಎಂ.ಎಸ್.ಧೋನಿ: ದಿ ಅನ್‌ಟೋಲ್ಡ್ ಸ್ಟೋರಿ